**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 87/2024**

**ಪಿ.ಡಬ್ಲುಃ 8 ಸಿಡಬ್ಲುಃ 9**

| | | |
|---|---|---|
| ಸಾಕ್ಷಿಯ ಹೆಸರು | : | ಧಮ್ಮೂರಪ್ಪ |
| ತಂದೆಯ ಹೆಸರು | : | ಈರಣ್ಣ |
| ವಯಸ್ಸು | : | 32 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಗೋಸಬಾಳ ಗ್ರಾಮ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 29-12-2025**

**ಮುಖ್ಯ ವಿಚಾರಣೆ ಮಾನ್ಯ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ-**

1) ನನಗೆ ಚಾಸಾ.1, 4 ಹಾಗು 5 ಇವರ ಪರಿಚಯವಿದೆ. ಚಾಸಾ.4 ಇವರು ನನ್ನ ಅಕ್ಕ. ಚಾಸಾ.1 ಇವರು ನನ್ನ ಮಾವ. ಚಾಸಾ.5 ಇವರು ನನ್ನ ಅಳಿಯ. ನನಗೆ ಹಾಜರಿರುವ 1 ಹಾಗು 4 ನೇ ಆರೋಪಿತರ ಪರಿಚಯವಿದೆ. 2 ನೇ ಆರೋಪಿ ಬಂದಮ್ಮ ಇವಳು ನನ್ನ 2 ನೇ ಅಕ್ಕ. ಅವಳ ಮಗಳಾದ ಮಂಜಮ್ಮ ಇವಳನ್ನು ನಾನು ಮದುವೆಯಾಗಿದ್ದೇನೆ.

2. ನನ್ನ ಹೆಂಡತಿ ಮಂಜಮ್ಮ ಇವಳ ಹೆರಿಗೆ ಹಳೆಯ ಬಸ್ ನಿಲ್ದಾಣ ಹತ್ತಿರ ಇರುವ ಡಾ.ರೇಖಾ ಇವರ ಆಸ್ಪತ್ರೆಯಲ್ಲಿ ಆಗಿತ್ತು. ಸದರಿ ಆಸ್ಪತ್ರೆಯಲ್ಲಿ ಮಂಜಮ್ಮ ಇವಳನ್ನು ನೋಡಿಕೊಳ್ಳಲು ನಾನು ಹಾಗೂ ಚಾಸಾ.4 ಇದ್ದೇವು. ಮಂಜಮ್ಮ ಇವಳು ಸದರಿ ಆಸ್ಪತ್ರೆಯಲ್ಲಿ ಒಂದು ವಾರದ ವರೆಗೆ ಇದ್ದಳು. ಮಗುವನ್ನು 15 ದಿವಸಗಳವರೆಗೆ ಸದರಿ ಆಸ್ಪತ್ರೆಯ ಐಸಿಯು ನಲ್ಲಿ ಇಟ್ಟಿದ್ದರು.

3. ನಂತರ 1 ನೇ ಆರೋಪಿ ಚಾಸಾ.1 ಇವರ ಮನೆಗೆ ಬಂದು ನೀವು ಯಾರು , ನಾವು ಯಾರು ನನ್ನ ಮಗಳ ಹೆರಿಗೆಯನ್ನು ಏಕೆ ಮಾಡಿದ್ದಿ ಎಂದು ಜಗಳ ತೆಗೆದು 1 ನೇ ಆರೋಪಿ ಕಟ್ಟಿಗೆಯಿಂದ ಚಾಸಾ.1 ಹಾಗೂ 4 ಇವರ ತಲೆಗೆ ಹೊಡೆದಿರುತ್ತಾನೆ. ಅದಲ್ಲದೇ 1 ನೇ ಆರೋಪಿ ಚಾಸಾ.5 ಇವರ ಭುಜಕ್ಕೆ ಕಟ್ಟಿಗೆಯಿಂದ ಹೊಡೆದಿರುತ್ತಾನೆ. ಆದ್ದರಿಂದ ಚಾಸಾ.1

ಹಾಗೂ 4 ಇವರ ತಲೆಗೆ ರಕ್ತಗಾಯಗಳು ಆಗಿದ್ದವು. ಅಲ್ಲಿ ನೆರೆವಿದ್ದ ಜನರು ಜಗಳ ಬಿಡಿಸಿರುತ್ತಾರೆ. ಅವರುಗಳ ಹೆಸರು ನನಗೆ ಗೊತ್ತಿಲ್ಲ.

4. ಚಾಸಾ.1, 4 ಹಾಗೂ 5 ಇವರನ್ನು ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಲಾಯಿತು. ಚಾಸಾ.1, 4 ಹಾಗೂ 5 ಇವರ ಹಲ್ಲೆಗೆ ಉಪಯೋಗಿಸಿದ ಮೂ.ಮಾ.1 ಹಾಗೂ 2 ಕಟ್ಟಿಗೆಗಳನ್ನು ಈಗ ನೋಡಿ ಗುರುತಿಸಿದ್ದೇನೆ. ಪೋಲೀಸರು ಈ ಪ್ರಕರಣದ ಬಗ್ಗೆ ನನ್ನನ್ನು ವಿಚಾರಣೆ ಮಾಡಿದ್ದಾರೆ.

<u>ಪಾಟೀಸವಾಲು 1 ನೇ ಆರೋಪಿ ಪರವಾಗಿ ಶ್ರೀ.ಶೇಕಣ್ಣ ಎಲ್.ಎ.ಡಿ.ಸಿ ವಕೀಲರಿಂದಃ</u>

5. ನನಗೆ ಕನ್ನಡ ಭಾಷೆ ಓದಲು ಹಾಗೂ ಬರೆಯಲು ಬರುವುದಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಪ್ರಶ್ನಿತ ಗಲಾಟೆಯಾದಾಗ ನಾನು ಹಾಜರಿರಲಿಲ್ಲ. 1 ನೇ ಆರೋಪಿತನ ಕೈಯಲ್ಲಿ ಒಂದೇ ಕಟ್ಟಿಗೆ ಇತ್ತು. ಗೌರಮ್ಮ ಇದನ್ನು ನೋಡಿರುತ್ತಾಳೆ. ನನ್ನ ಮೇಲೆಯು ಕೂಡ ಕೊಲೆ ಪ್ರಯತ್ನದ ಆರೋಪ ಇದೆ ಎಂದರೆ ಸರಿ. ಡಾ.ರೇಖಾ ಇವರ ಆಸ್ಪತ್ರೆಯಲ್ಲಿ ನನ್ನ ಹೆಂಡತಿಯ ಹೆರಿಗೆ ಆಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಆ ದಿವಸ ಯಾವುದೇ ಗಲಾಟೆಯಾಗಿಲ್ಲ, ಆದರೂ ಕೂಡ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೂ.ಮಾ.1 ಹಾಗೂ 2 ಕಟ್ಟಿಗೆಗಳನ್ನು ಮೊದಲನೇ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲು 4 ನೇ ಆರೋಪಿ ಪರವಾಗಿ ಶ್ರೀ ಎಚ್.ವಿ. ವಕೀಲರಿಂದ</u>

ಶ್ರೀ ಎಚ್.ವಿ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

SC No.87/2024
PW- 8

<u>ಮರುವಿಚಾರಣೆಃ</u>

ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

C/C.2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.